◆ **Decolonizing the Mind ಕೃತಿಯ ಮೂಲಕ ಗೂಗಿ ವಾ ಥಿಯಾಂಗೊ ತೃತೀಯ ಜಗತ್ತಿನ ಆಲೋಚನಾ ಕ್ರಮವನ್ನೇ ಮೂಲಭೂತವಾಗಿ ಬದಲಿಸಿದರು. ಆಫ್ರಿಕಾದ ಬೌದ್ಧಿಕ ಲೋಕವು ಈ ಕೃತಿಯನ್ನು ಯಾವ ರೀತಿ ಸ್ವೀಕರಿಸಿತು?**

ಆಫ್ರಿಕನ್ ಭಾಷೆಯನ್ನು ಸಾಹಿತ್ಯ ಮತ್ತು ಶಿಕ್ಷಣದಲ್ಲಿ ಹೇಗೆ ಬಳಸಬೇಕು ಅಂತ ಗೂಗಿ ಪುಸ್ತಕ ಒತ್ತಿ ಹೇಳಿತು. ಇಷ್ಟು ವರುಷಗಳ ನಂತರವೂ ಇನ್ನೂ ಜೀವಂತವಾಗಿ ಉಳಿದಿದೆ ಆ ಪುಸ್ತಕ. ಆದರೆ ಕೆಲವು ವಿಮರ್ಶಕರು ಅದರ ಬಗ್ಗೆ ಚರ್ಚೆ ಮಾಡ್ತಾ ಇದ್ದಾರೆ. ತಮ್ಮ ಬೌದ್ಧಿಕ ತೆವಲನ್ನು ತೋರಿಸಿಕೊಳ್ಳುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ, ನಾನು ಗೂಗಿಯವರ ವಿಚಾರಗಳನ್ನು ಸಂಪೂರ್ಣವಾಗಿ ಒಪ್ಪುತ್ತೇನೆ. Decolonizing the Mind ಓದೋದು ಎಂದರೆ ಮೂಗನಿಗೆ ಮಾತು ಬಂದ ಹಾಗೆ. ಆಫ್ರಿಕನ್ ಬುದ್ಧಿಜೀವಿಗಳ ನಡುವೆ, ಈ ಪುಸ್ತಕ ದೊಡ್ಡ ಚರ್ಚೆಯನ್ನು ಹುಟ್ಟುಹಾಕಿತು. ಕೆಲವರು ಜೋರಾಗಿ ಚಪ್ಪಾಳೆ ತಟ್ಟಿದರು. ಇನ್ನು ಕೆಲವರು ಹಿಂಜರಿದರು. ಆದರೆ ಹೊಸ ತಲೆಮಾರಿನ ಚಿಂತಕರು ಮತ್ತು ಬರಹಗಾರರಿಗೆ, ಇದು ಹೊಸ ಹೆದ್ದಾರಿಯನ್ನೇ ತೆರೆಯಿತು. ನಾನು ನನ್ನ ಭಾಷೆ ಬಗ್ಗೆ ಹೆಮ್ಮೆ ಪಟ್ಟೆ. ಕೀನ್ಯಾದವಳೆಂಬ ನನ್ನ ಗುರುತಿನ ಬಗ್ಗೆ ಹೆಮ್ಮೆ ಪಟ್ಟೆ. ನನ್ನ ಕಥೆಯನ್ನು ನನ್ನದೇ ಭಾಷೆಯಲ್ಲಿ ಹೇಳುವುದರ ಬಗ್ಗೆ ಹೆಮ್ಮೆ ಪಟ್ಟೆ.

◆ **ನಿಮ್ಮನ್ನು ಸದಾ ಕಾಡುವ ಸಂಗತಿ ಯಾವುದು?**

ಹೆಣ್ಣಾಗಿ ನನಗೆ ಯಾವತ್ತೂ ಕಾಡುವ ಸಂಗತಿಯೊಂದಿದೆ. ನಾವು ದೇಶ ದೇಶಗಳ ನಡುವೆ ಸಂಭವಿಸಬಹುದಾದ ಅಣು ಯದ್ಧದ ಕುರಿತು ಆತಂಕ ವ್ಯಕ್ತಪಡಿಸುತ್ತೇವೆ. ಹಾಗೆ ನೋಡಿದರೆ ಅಡುಗೆಮನೆಯಲ್ಲೂ ಸಾಕಷ್ಟು ಹತಾರಗಳಿವೆ. ಆದರೆ ನಾವು ಎಂದೂ ಅವುಗಳನ್ನು ಅಯುಧಗಳೆಂದು ಪರಿಗಣಿಸುವುದೇ ಇಲ್ಲ. ಬೆಂಕಿ ಪೆಟ್ಟಿಗೆ, ಇಲಿ ಪಾಷಾಣ, ಚಾಕು ಚೂರಿ ಇತ್ಯಾದಿ. ಸಿಟ್ಟು ಬಂದಾಗ ಹೆಚ್ಚೆಂದರೆ ನಾವು ಚಾಕುವಿನಿಂದ ಬ್ರೆಡ್ಡು, ಚೀಸು, ಈರುಳ್ಳಿ, ಆಲೂಗಡ್ಡೆಗಳನ್ನು ಮಾತ್ರ ಕತ್ತರಿಸುತ್ತೇವೆ. ನಿತ್ಯ ಕೌಟುಂಬಿಕ ದೌರ್ಜನ್ಯದಿಂದ ನರಳುವ ಹೆಣ್ಣು ಮಕ್ಕಳೂ ಸಹಿತ, ಬಿಡುಗಡೆಯ ಬೇರೆ ಯಾವ ಸಾಧ್ಯತೆಯನ್ನು ಅಪ್ಪಿ ತಪ್ಪಿಯೂ ಯೋಚಿಸಲಾರರು. ಶತಮಾನಗಳಿಂದ ಕುಟುಂಬವನ್ನು ಪೊರೆಯುವ ಮತ್ತದರ ಪ್ರತಿಷ್ಠೆಯನ್ನು ಕಾಯುವ ಜವಾಬ್ದಾರಿಯನ್ನೆಲ್ಲಾ ಹೆಣ್ಣುಮಕ್ಕಳಿಗೇ ಬರೆದು ಕೊಡಲಾಗಿದೆಯೇನೋ? ಗಂಡಸರು ದಾರಿ ತಪ್ಪಿದಾಗ ತಾಯ್ತನದ ಹೆಸರಿನಲ್ಲಿ ಹೆಂಗಸರನ್ನು ಹಾಗೆ ಪಳಗಿಸಿ ನಿಯಂತ್ರಿಸಲಾಗುತ್ತಿದೆ ಅನ್ನುತ್ತೆ.

◆ **ನಿಮ್ಮನ್ನು ಕಾಡುವ ಯಾವುದಾದರೂ ಒಂದು ಕವಿತೆಯ ಸಾಲು ನೆನಪಿಸಿಕೊಳ್ಳಬಹುದಾ?**

ನೈಜೀರಿಯಾದ ಕವಯತ್ರಿ Ijeoma Umebinyuo ಬರೆದ ಈ ಸಾಲುಗಳು ನನಗೆ ತುಂಬಾ ಇಷ್ಟ:

He said
'You are beautiful'
I told him
'beautiful'
is a lazy and lousy way to describe me
Your not alive
to please the aesthetic
of the colonized eye!

–ತಕ್ಷಣಕ್ಕೆ ನೆನಪಾದ ಸಾಲುಗಳಿವು.

◆ **ನಿಮ್ಮ ಪ್ರಕಾರ ಪ್ರೇಮಿಸುವುದೆಂದರೆ ಏನು?**

ಪ್ರೇಮಿಸುವುದೆಂದರೆ ನಮ್ಮನ್ನು ನಾವು ಕೊಟ್ಟುಕೊಳ್ಳುವುದು. ಗಂಡು ಮತ್ತು ಹೆಣ್ಣು ಎಂಬ ಭೇದವಿಲ್ಲದೇ ಇಡೀ ಜೀವ ಸಂಕುಲವೇ ತೊಡಗಿಕೊಳ್ಳುವ ಈ ಸೃಜನಶೀಲ ಪ್ರಕ್ರಿಯೆಯಲ್ಲಿ, ಅಹಂ ನಿರಸನ ಅನಿವಾರ್ಯ. ಇವತ್ತಿನ ಎಲ್ಲಾ ಸಾಮಾಜಿಕ ಕಾಯಿಲೆಗಳಿಗೆ ಔಷಧ ಇದೊಂದೇ. ಇಲ್ಲದಿದ್ದರೆ ಪ್ರೇಮ ನಿಮಗೆ ಹೆಚ್ಚಿನದೇನನ್ನೂ ಕೊಡುವುದಿಲ್ಲ ಅಥವಾ ನಿಮ್ಮಿಂದ ಪಡೆದುಕೊಳ್ಳವುದೂ ಇಲ್ಲ!

ಈ ಪ್ರಕೃತಿ ನಮ್ಮನ್ನು ಸೃಷ್ಟಿಸಿರುವುದು
ದ್ವೇಷಿಸುವುದಕ್ಕಲ್ಲ;
ಪ್ರೀತಿಸುವುದಕ್ಕೆ
ಕೇವಲ ಪ್ರೀತಿಸುವುದಕ್ಕೆ!

–ಈ ಸರಳವಾದ ಸತ್ಯ ಅರ್ಥ ಮಾಡಿಕೊಳ್ಳಲು ನಮಗೆ ಇನ್ನೂ ಅದೆಷ್ಟು ದಿನ ಬೇಕಾಗುತ್ತೋ?

●